# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಬೃ.ಬೆ.ಮ.ಪಾ/ಸಕಾಅ/ಮಾಉವಿ/ಪಿಆರ್/243/2021-22

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ
ಮಾರತ್ತಹಳ್ಳಿ ಉಪವಿಭಾಗ
ಬಿಬಿಎಂಪಿ, ಬೆಂಗಳೂರು.
ದಿನಾಂಕ:26.11.2021

## 150 ಬೆಳ್ಳಂದೂರು ವಾರ್ಡ್ ಸಮಿತಿ ಸಭೆಯ ನಡವಳಿಗಳು:

***********

ದಿನಾಂಕ:-26/11/2021 ಮಧ್ಯಾಹ್ನ: 2:30 ಗಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಶ್ರೀ.ಡಾ॥ ಅಮೃತೇಶ್ ನೋಡಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ನಡೆದ ನಡವಳಿಗಳು.

**ವಾರ್ಡ್ ಸಮಿತಿ ಸಭೆಗೆ ಹಾಜರಾದ ಸದಸ್ಯರು, ವಾರ್ಡ್ ಲೇಔಟ್ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸ್ಥಳೀಯ ನಿವಾಸಿಗಳು:-**

1. ಶ್ರೀ.ಡಾ॥ ಅಮೃತೇಶ್ – ವಾರ್ಡ್ ನಂ.150ರ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ ಚೇತನ್ ಕೆ.ಎಂ – ಕಾರ್ಯದರ್ಶಿಗಳು ಹಾಗೂ ಸಹಯಕ ಅಭಿಯಂತರರು ವಾರ್ಡ್-150
3. ಶ್ರೀ ಮಂಜುನಾಥ್ – ವಾರ್ಡ್ ಸಮಿತಿ ಸಭೆಯ ಸದಸ್ಯರು.
4. ಶ್ರೀ.ಸುರೇಶ್ – ವಾರ್ಡ್ ಸಮಿತಿ ಸಭೆಯ ಸದಸ್ಯರು.
5. ಶ್ರೀ.ಶ್ರೀಕಾಂತ್ – ನಿವಾಸಿಗಳು.
6. ಶ್ರೀಮತಿ.ರೂಪಲ್ ರಾಲ್ಫ್ – ಲೇಕ್ ಡ್ಯೂ ರೆಸಿಡೆನ್ಸಿ ಸದಸ್ಯರು.
7. ಶ್ರೀ. ಟಿ.ಪಿ.ಸೆಂಗೋಟವನ್ – ನಿವಾಸಿಗಳು.
8. ಶ್ರೀ.ಅರುಣ್ – ಲೇಕ್ ಡ್ಯೂ ರೆಸಿಡೆನ್ಸಿ ಸದಸ್ಯರು.
9. ಶ್ರೀ ಎ.ರಮೇಶ್ – ವಾರ್ಡ್ ಸಮಿತಿ ಸಭೆಯ ಸದಸ್ಯರು.

**ವಾರ್ಡ್ ಸಮಿತಿ ಸಭೆಗೆ ಹಾಜರಾದ ಅಧಿಕಾರಿಗಳು:-**

1. ಶ್ರೀ.ಅರುಣ್ ಎಸ್.ಡಿ – ಸ.ಕಾ.ಅ ಮಾರತ್ತಹಳ್ಳಿ ಉಪವಿಭಾಗ
2. ಶ್ರೀ.ಮುರಳಿ ಮೋಹನ್ – ಕಂದಾಯ ಪರಿವೀಕ್ಷಕರು ವಾರ್ಡ್ ನಂ.150
3. ಶ್ರೀ ಮಹೇಶ್ ಕುಮಾರ್ – ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.150
4. ಶ್ರೀ. ರಾಜಣ್ಣ – ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.150
5. ಶ್ರೀ. ಡಾ॥ಅನಿಲ್ ಎ.ವಿ – ದೊಡ್ಡಕನ್ನೆಲ್ಲಿ ಆರೋಗ್ಯ ಪ್ರಾಥಮಿಕ ಕೇಂದ್ರ,
6. ಶ್ರೀ.ಚಂದ್ರ ಶೇಖರ್ – ಎಲೆಕ್ಟ್ರಿಕಲ್ ಗುತ್ತಿಗೆದಾರರು.
7. ಶ್ರೀ.ಚನ್ನಪ್ಪ – ಹೆಚ್.ಎಸ್.ಆರ್ ಸಂಚಾರಿ ಪೊಲೀಸ್ ವಿಭಾಗ
8. ಶ್ರೀ.ಎಲ್.ಎನ್.ರೆಡ್ಡಿ – ಸಹಾಯಕ ಅಭಿಯಂತರರು (ಬೆಸ್ಕಾಂ)
9. ಶ್ರೀ.ಎಂ.ರಾತೋಡ್ – ಹೆಡ್ ಕಾನ್ಸೆಬಲ್(ಬೆಳ್ಳಂದೂರು ಪೊಲೀಸ್ ಠಾಣೆ)
10. ಶ್ರೀ.ದೇವೇಗೌಡ ಟಿ.ಬಿ – ಕಿರಿಯ ಅಭಿಯಂತರರು (ಬೆಸ್ಕಾಂ ಕಸವನಹಳ್ಳಿ)

ಶ್ರೀ.ಡಾ॥ ಅಮೃತೇಶ್ ನೋಡಲ್ ಅಧಿಕಾರಿ ವಾರ್ಡ್-150 ಬೆಳ್ಳಂದೂರು ರವರು ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಭೆಯ ಸದಸ್ಯರು ಹಾಗೂ ಹಾಜರಿದ್ದ ಅಧಿಕಾರಿಗಳನ್ನು ಸ್ವಾಗತಿಸಿ ಮಾತನಾಡುತ್ತಾ ವಾರ್ಡ್‌ನ ಕುಂದು ಕೊರತೆಗಳನ್ನು ಚರ್ಚಿಸುವುದಾಗಿ ತಿಳಿಸಿದರು.

- **ಬೃಹತ್ ನೀರುಗಾಲುವೆ ಬಗ್ಗೆ**

ಕೈಕೊಂಡ್ರಹಳ್ಳಿ ಗ್ರಾಮದಲ್ಲಿ ಸೆರೆನಿಟಿ ಲೇಔಟ್‌ನ ಚರಂಡಿಯನ್ನು ಪಕ್ಕದಲ್ಲಿನ ಬೃಹತ್ ನೀರುಗಾಲುವೆಗೆ ಸಂಪರ್ಕ ನೀಡಲು ಶ್ರೀ.ರಮೇಶ್ ರವರು ಸಭೆಯಲ್ಲಿ ಸೂಚಿಸಿರುತ್ತಾರೆ. ಈ ವಿಷಯದ ಸಂಬಂಧ ಗೈರಾದ ನೀರುಗಾಲುವೆ ವಿಭಾಗದ ಅಧಿಕಾರಿಗಳಿಗೆ ದೂರವಾಣಿ ಮುಖಾಂತರ ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸುವುದಾಗಿ ಸಭೆಯಲ್ಲಿ ತಿಳಿಸಿದರು.

- **ಕಸ ಸಮಸ್ಯೆ ಮತ್ತು ನಿರ್ವಹಣೆ ಬಗ್ಗೆ**

ಮೊದಲೀಯಾರ್ 2ನೇ ಅಡ್ಡರಸ್ತೆಯ ಕೊನೆಯಲ್ಲಿ ಖಾಲಿಜಾಗದಲ್ಲಿ ಕಾಂಪೌಂಡ ನಿರ್ಮಿಸಲಾಗಿದ್ದು, ಸದರಿ ಕಾಂಪೌಂಡ್ ಗೋಡೆಯನ್ನು ಒಡೆದು ಹಾಕಿ ಕಸ ಹಾಕುತ್ತಿರುವ ಬಗ್ಗೆ ನಿವಾಸಿಗಳು ತಿಳಿಸಿದರು. ಸದರಿ ವಿಷಯದ ಸಂಬಂಧ ನೋಡಲ್ ಅಧಿಕಾರಿಗಳು ಸದರಿ ಸಭೆಯಲ್ಲಿ ಹಾಜರಿದ್ದ ಆರೋಗ್ಯ ಪರಿವೀಕ್ಷಕರಾದ ಶ್ರೀ.ಮಹೇಶ್ ಕುಮಾರ್ ರವರಿಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಹರಳೂರು ಸರ್ಕಾರಿ ಶಾಲೆಯ ಆವರಣದಲ್ಲಿ ಗಿಡಗಂಟೆಗಳು, ಕಸ-ಕಡ್ಡಿಗಳು ಹೆಚ್ಚಾಗಿದ್ದು ಹಾಗೂ ಪ್ರಸ್ತುತ ಶಾಲೆಯು ಪ್ರಾರಂಭವಾಗಿರುವ ಮೇರೆಗೆ ಮಕ್ಕಳ ಆರೋಗ್ಯದ ಹಿತದೃಷ್ಟಿಯಿಂದ ಸದರಿ ಜಾಗವನ್ನು ಸ್ವಚ್ಚಗೊಳಿಸಿಕೊಡಲು ಶಾಲೆಯ ಮುಖ್ಯ ಶಿಕ್ಷಕರು ಶ್ರೀ.ಮಂಜುನಾಥ್, ವಾರ್ಡ್ ಸಭೆಯ ಸದಸ್ಯರೊಂದಿಗೆ ತಿಳಿಸಲಾಗಿ, ಸದರಿಯವರು ಸಭೆಯಲ್ಲಿ ಪ್ರಸ್ತಾಪಿಸಿದ್ದು, ಸದರಿ ವಿಷಯದ ಸಂಬಂಧ ನೋಡಲ್ ಅಧಿಕಾರಿಗಳು ಸದರಿ ಸಭೆಯಲ್ಲಿ ಹಾಜರಿದ್ದ ಆರೋಗ್ಯ ಪರಿವೀಕ್ಷಕರಾದ ಶ್ರೀ.ಮಹೇಶ್ ಕುಮಾರ್ ರವರಿಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಕೈಕೊಂಡ್ರಹಳ್ಳಿ ಗ್ರಾಮದಲ್ಲಿ ತ್ಯಾಜ್ಯ ಸಂಗ್ರಹಣೆ ವಾಹನವು ಪ್ರತಿ ದಿನ ಸರಿಯಾಗಿ ಸಂಗ್ರಹಣೆಗಾಗಿ ಬರುತ್ತಿಲ್ಲವೆಂದು ಶ್ರೀ.ರಮೇಶ್ ವಾರ್ಡ್ ಸಭೆಯ ಸದಸ್ಯರು ಸಭೆಯಲ್ಲಿ ತಿಳಿಸಿದರು. ಸದರಿ ವಿಷಯದ ಸಂಬಂಧ ನೋಡಲ್ ಅಧಿಕಾರಿಗಳು ಸದರಿ ಸಭೆಯಲ್ಲಿ ಹಾಜರಿದ್ದ ಆರೋಗ್ಯ ಪರಿವೀಕ್ಷಕರಾದ ಶ್ರೀ.ಮಹೇಶ್ ಕುಮಾರ್ ರವರಿಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

- **ಕೋವಿಡ್-19 ಬಗ್ಗೆ.**

ವಾರ್ಡ್ ಸಂಖ್ಯೆ-150 ವ್ಯಾಪ್ತಿಯಲ್ಲಿ ಇಲ್ಲಿಯವರೆಗೂ ಹದಿನಾಲ್ಕು ದಿನಗಳಿಗೆ ಒಟ್ಟಾರೆ 59 ಜನರಿಗೆ ಕೋವಿಡ್ ದೃಢಿಕರಣವಾಗಿರುತ್ತದೆ. ಅದರಲ್ಲಿ 52 ಮಂದಿ ಹೋ ಐಸೋಲೇಷನ್‌ನಲ್ಲಿರುವುದಾಗಿ ಹಾಗೂ ಲಸಿಕೆ ಅಭಿಯಾನವನ್ನು ದೊಡ್ಡಕನ್ನೆಲ್ಲಿಯ ಸರ್ಕಾರಿ ಆಸ್ಪತ್ರೆಯಲ್ಲಿ ಲಸಿಕೆಯನ್ನು ಹಾಕುತ್ತಿರುವುದಾಗಿ ಮತ್ತು ಕೋವಿಡ್ ಟಾರ್ಗೆಟ್ ಟೆಸ್ಟಿಂಗ್ ಎಂಬುದನ್ನು ಹೊಸದಾಗಿ ಕೈಗೊಳ್ಳುವುದಾಗಿ ಸಭೆಯಲ್ಲಿ ಹಾಜರಿದ್ದ ಡಾ॥ಅನಿಲ್ (ಮೆಡಿಕಲ್ ಆಫೀಸರ್) ರವರು ಸಭೆಯಲ್ಲಿ ತಿಳಿಸಿದರು.

- **ಬೀದಿ ದೀಪ ನಿರ್ವಹಣೆ ಬಗ್ಗೆ.**

ಸರ್ಜಾಪುರ ಮುಖ್ಯರಸ್ತೆಯಲ್ಲಿ ರಸ್ತೆ ಬದಿಯ ಬೀದಿದೀಪಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲವೆಂದು ಸಭೆಯಲ್ಲಿ ಶ್ರೀ.ರಮೇಶ್,ಸದಸ್ಯರು ಹಾಗೂ ಸಂಚಾರಿ ಪೊಲೀಸ್‌ರವರು ಸಹ ಸಭೆಯಲ್ಲಿ ತಿಳಿಸಿದರು. ಮುಂದುವರೆದು ಸಭೆಯಲ್ಲಿ ಹಾಜರಿದ್ದ ಬಿಬಿಎಂಪಿ ವಿದ್ಯುತ್ ವಿಭಾಗದ ಅಧಿಕಾರಿಗಳಿಗೆ ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳಲು ಸಭೆಯಲ್ಲಿ ಸೂಚಿಸಿದರು.

- **ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಮಸ್ಯೆಗಳ ಬಗ್ಗೆ**

ಬಿಡಬ್ಲ್ಯೂಎಸ್‌ಎಸ್‌ಬಿ ವಿಭಾಗಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿ ಹಾಜರಿದ್ದ ಎಲ್ಲಾ ವಾರ್ಡ್ ಸದಸ್ಯರುಗಳು ತಮ್ಮ ಗ್ರಾಮದಲ್ಲಿ ಪ್ರಗತಿಯಲ್ಲಿರುವ ಒಳಚರಂಡಿ ಹಾಗೂ ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿಯನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲು ಸಭೆಯಲ್ಲಿ ತಿಳಿಸಿದರು. ಸದರಿ ಕಾಮಗಾರಿಯನ್ನು ನಿರ್ವಹಿಸುತ್ತಿರುವ ರಸ್ತೆಗಳಲ್ಲಿ ಸದರಿ ಕಾಮಗಾರಿಗಳಿಂದ ರಸ್ತೆಗೆ ಅಗಿರುವ ದುರಸ್ಥಿಯನ್ನು ಸರಿಪಡಿಸಿ ಸುಗುಮ ಸಂಚಾರಕ್ಕೆ ಅನುವು ಮಾಡಿಕೊಡಲು ಸಭೆಯಲ್ಲಿ ತಿಳಿಸಿದರು. ಸದರಿ ವಿಷಯದ ಸಂಬಂದದ ಅಧಿಕಾರಿಗಳು ಸಭೆಗೆ ಗೈರಾದ ಕಾರಣ ಸದರಿಯವರಿಗೆ ದೂರವಾಣಿ ಮೂಲಕ ಸಂಪರ್ಕಿಸಿ ಈ ವಿಷಯದ ಬಗ್ಗೆ ಕ್ರಮ ಕೈಗೊಳ್ಳಲು ಕಾರ್ಯದರ್ಶಿಗಳಿಗೆ ಸೂಚಿಸಿದರು.

- **ಬೆಸ್ಕಾಂ ಇಲಾಖೆಯ ವಿಷಯಗಳ ಬಗ್ಗೆ.**

ಬೆಳ್ಳಂದೂರು ವಾರ್ಡ್ ವ್ಯಾಪ್ತಿಯಲ್ಲಿ Underground power line connection ಕಾಮಗಾರಿಯು ಪ್ರಗತಿಯಲ್ಲಿದ್ದು, ಸದರಿ ಕಾಮಗಾರಿಯಿಂದ ರಸ್ತೆಯನ್ನು ಅಗೆದು ಸಮರ್ಪಕವಾಗಿ ರಸ್ತೆಯನ್ನು ಎಥಾಸ್ಥಿತಿಗೆ ತರಲು ಸಭೆಯಲ್ಲಿ ಹಾಜರಿದ್ದ ಬೆಳ್ಳಂದೂರು ವಾರ್ಡ್ ನಿವಾಸಿಗಳು ಸಭೆಯಲ್ಲಿ ತಿಳಿಸಿದರು. ಮುಂದುವರೆದು ಸದರಿ ಕಾಮಗಾರಿಗಳಲ್ಲಿ ಬಳಸಲಾದ ಬೃಹತ್ತಾಕರದ ರಿಮ್‌ಗಳನ್ನು ರಸ್ತೆಯ ಬದಿಗಳಲ್ಲಿಯೇ ಬಿಟ್ಟು ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗಿರುವುದಾಗಿ ಸಭೆಯಲ್ಲಿ ತಿಳಿಸಿದರು. ಸದರಿ ವಿಷಯದ ಸಂಬಂಧ ಬೆಸ್ಕಾಂ ಅಧಿಕಾರಿಗಳಿಗೆ ಕ್ರಮ ವಹಿಸುವಂತೆ ಸೂಚಿಸಿದರು.

- **ಕುಡಿಯುವ ನೀರಿನ ವಿಷಯಗಳ ಬಗ್ಗೆ.**

ಕೈಕೊಂಡ್ರಹಳ್ಳಿ ಗ್ರಾಮದಲ್ಲಿ ಕುಡಿಯುವ ನೀರಿನ ತೊಂದರೆಯಾಗುತ್ತಿದ್ದು, ಬೋರ್‌ವೆಲ್‌ನ್ನು ಕೊರೆಸುವ ಬಗ್ಗೆ ಶ್ರೀ.ರಮೇಶ್ ಸದಸ್ಯರು ಸಭೆಯಲ್ಲಿ ತಿಳಿಸಿದರು. ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.

- **ವಾರ್ಡ್ ಕಾಮಗಾರಿ ಹಾಗೂ ರಸ್ತೆ ಮೂಲಭೂತ ಸೌಕರ್ಯ ಇಲಾಖೆಯ ವಿಷಯಗಳ ಬಗ್ಗೆ:**

ಬೆಳ್ಳಂದೂರು ವಾರ್ಡ್ ವ್ಯಾಪ್ತಿಯ ರಿಲೇಬಲ್ ಲೇಕ್ ಡ್ಯೂ ರೆಸಿಡೆನ್ಸಿಯ 1ನೇ ಮುಖ್ಯರಸ್ತೆ, ಅಡ್ಡರಸ್ತೆಗಳಲ್ಲಿ ಮತ್ತು ಕಸವನಹಳ್ಳಿ ಗ್ರಾಮದ ಮೊದಲಿಯಾರ್ ಬಡಾವಣೆಯಲ್ಲಿ ರಸ್ತೆ ಕಾಮಗಾರಿಯನ್ನು ಕೈಗೊಳ್ಳಲು ಶ್ರೀಮತಿ.ರೂಪಲ್ ರಾಲ್ಫ್ ರವರು ಸಭೆಯಲ್ಲಿ ತಿಳಿಸಿದರು. ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.

ಕೈಕೊಂಡ್ರಹಳ್ಳಿ ಗ್ರಾಮದ ಸೆರೆನಿಟಿ ಬಡಾವಣೆಯಲ್ಲಿ ರಸ್ತೆ ಕಾಮಗಾರಿಯನ್ನು ಕೈಗೊಳ್ಳಲು ಶ್ರೀ.ರಮೇಶ್ ರವರು ಸಭೆಯಲ್ಲಿ ತಿಳಿಸಿದರು. ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.

ದೇವರಬೀಸನಹಳ್ಳಿ ಗ್ರಾಮದ ಮುಖ್ಯರಸ್ತೆಯ ರಸ್ತೆ ಕಾಮಗಾರಿಯನ್ನು ತ್ವರಿತವಾಗಿ ಮುಗಿಸಲು ಅಲ್ಲಿನ ನಿವಾಸಿಗಳು ಕೋರಿರುತ್ತಾರೆ. ಈ ವಿಷಯದ ಸಂಬಂಧ ನೋಡೆಲ್ ಅಧಿಕಾರಿಯವರು ಸಭೆಗೆ ರಸ್ತೆ ಮೂಲಭೂತ ಸೌಕರ್ಯ ಇಲಾಖೆಯ ಅಧಿಕಾರಿಗಳು ಗೈರಾದ ಕಾರಣ ಸದರಿ ಅಧಿಕಾರಿಗಳಿಗೆ ದೂರವಾಣಿ ಮುಖಾಂತರ ಸೂಚಿಸುವುದಾಗಿ ಸಭೆಯಲ್ಲಿ ತಿಳಿಸಿದರು.

ಗೇರ್ ಶಾಲೆಯ ಮುಖ್ಯರಸ್ತೆಯ ರಸ್ತೆ ಕಾಮಗಾರಿಯನ್ನು ತ್ವರಿತವಾಗಿ ಮುಗಿಸಲು ಅಲ್ಲಿನ ನಿವಾಸಿಗಳು ಕೋರಿರುತ್ತಾರೆ. ಈ ವಿಷಯದ ಸಂಬಂಧ ನೋಡೆಲ್ ಅಧಿಕಾರಿಯವರು ಸಭೆಗೆ ರಸ್ತೆ ಮೂಲಭೂತ ಸೌಕರ್ಯ ಇಲಾಖೆಯ ಅಧಿಕಾರಿಗಳು ಗೈರಾದ ಕಾರಣ ಸದರಿ ಅಧಿಕಾರಿಗಳಿಗೆ ದೂರವಾಣಿ ಮುಖಾಂತರ ಸೂಚಿಸುವುದಾಗಿ ಸಭೆಯಲ್ಲಿ ತಿಳಿಸಿದರು.

ಸರ್ಜಾಪುರ ಮುಖ್ಯರಸ್ತೆಯಲ್ಲಿ ಕೈಕೊಂಡ್ರಹಳ್ಳಿ ಬಳಿಯಲ್ಲಿ ಸ್ಪೀಡ್ ಬ್ರೇಕರ್ ಅಳವಡಿಸಲು ಸಭೆಯಲ್ಲಿ ಶ್ರೀ.ರಮೇಶ್ ರವರು ತಿಳಿಸಿದರು. ಈ ವಿಷಯದ ಸಂಬಂಧ ನೋಡೆಲ್ ಅಧಿಕಾರಿಯವರು ಸಭೆಗೆ ರಸ್ತೆ ಮೂಲಭೂತ ಸೌಕರ್ಯ ಇಲಾಖೆಯ ಅಧಿಕಾರಿಗಳು ಗೈರಾದ ಕಾರಣ ಸದರಿ ಅಧಿಕಾರಿಗಳಿಗೆ ದೂರವಾಣಿ ಮುಖಾಂತರ ಸೂಚಿಸುವುದಾಗಿ ಸಭೆಯಲ್ಲಿ ತಿಳಿಸಿದರು.

ಈ ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಮತ್ತು ಸಹಾಯಕ ಅಭಿಯಂತರರು
ವಾರ್ಡ್ ನಂ. 150 ಬೆಳ್ಳಂದೂರು.

26/11/21
ಅಧ್ಯಕ್ಷರು
ಹಾಗೂ ನೋಡೆಲ್ ಅಧಿಕಾರಿ
ವಾರ್ಡ್ ನಂ. 150 ಬೆಳ್ಳಂದೂರು

**ಪ್ರತಿಯನ್ನು:**

1. *ಮಾನ್ಯ ಜಂಟಿ ಆಯುಕ್ತರು ಮಹದೇವಪುರ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.*
2. *ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.*
3. *ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.*
4. *ಕಛೇರಿ ಪ್ರತಿ.*

## : ಸಭೆಯ ಚರ್ಚೆಯ ವಿಷಯಗಳು:

| | |
|---|---|
| ವಿಷಯ – 1 | ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್ –19 ಗೆ ಸಂಬಂಧಿಸಿದ ನಿರ್ವಹಣೆ ಬಗ್ಗೆ. |
| ವಿಷಯ –2 | ವಾರ್ಡ್ ವ್ಯಾಪ್ತಿಯಲ್ಲಿನ ತೆರಿಗೆ ಸಂಗ್ರಹಣೆಯ ಬಗ್ಗೆ. |
| ವಿಷಯ –3 | ವಾರ್ಡ್ ವ್ಯಾಪ್ತಿಯಲ್ಲಿನ ರಸ್ತೆ/ಚರಂಡಿಗಳ ದುರಸ್ಥಿಯನ್ನು ಕೈಗೊಳ್ಳುವ ಬಗ್ಗೆ. |
| ವಿಷಯ –4 | ಬೀದಿ ದೀಪಗಳ ನಿರ್ವಹಣೆ ಕುರಿತು. |
| ವಿಷಯ –5 | ವಾರ್ಡ್ ವ್ಯಾಪ್ತಿಯಲ್ಲಿನ ಸ್ಯಾನಿಟರಿ ದೂರುಗಳ ಬಗ್ಗೆ. |
| ವಿಷಯ –6 | ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಬಗ್ಗೆ. |
| ವಿಷಯ –7 | ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಚರ್ಚಿಸುವ ವಿಚಾರ. |
| ವಿಷಯ –8 | ಒಂಟಿ ಮನೆ ನಿರ್ಮಾಣಕ್ಕಾಗಿ ಸಲ್ಲಿಸಿರುವ ಅರ್ಜಿಗಳ ಚರ್ಚೆ ಮತ್ತು ಅನುಮೋದನೆ. |
| ವಿಷಯ –9 | ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬಹುದಾದ ಇತರೆ ವಿಚಾರಗಳು. |

**********

# " ವಾರ್ಡ್ ಕಮಿಟಿ ಸಭೆಯ ಹಾಜರಾತಿ"

ದಿನಾಂಕ: 26.11.2021 ರಂದು ಶುಕ್ರವಾರ ಮಧ್ಯಾಹ್ನ: 2.30 ಗಂಟೆಗೆ ಸರಿಯಾಗಿ ವಾರ್ಡ್ ನಂ.150 ಬೆಳ್ಳಂದೂರು, ಬಿಬಿಎಂಪಿ ವಾರ್ಡ್ ಕಛೇರಿ ಇಲ್ಲಿ ವಾರ್ಡ್ ಕಮಿಟಿ ಸಭೆಯ ನೋಡೆಲ್ ಅಧಿಕಾರಿ ಶ್ರೀ.ಪುಟ್ಟಪ್ಪ ರವರು ಅಧ್ಯಕ್ಷತೆ ವಹಿಸಿದ್ದು, ಸದರಿ ಸಭೆಯಲ್ಲಿ ಹಾಜರಿದ್ದ ಕಮಿಟಿಯ ಸದಸ್ಯರುಗಳು ಹಾಗೂ ಅಧಿಕಾರಿಗಳು:

| ಕ್ರ.ಸಂ | ವಾರ್ಡ್ ಕಮಿಟಿ ಸದಸ್ಯರುಗಳು/ಅಧಿಕಾರಿಗಳು | ಹುದ್ದೆ | ದೂರವಾಣಿ ಸಂಖ್ಯೆ | ಷರಾ |
|---|---|---|---|---|
| 1 | Mahesh Kumar. S. | SR. HI | 9902347688 | |
| 2 | RAJANNA.K. | JrHI | 9738164215 | |
| 3 | DR. ANIL. A.V. | COVID-MEDICAL OFFICER | 7892704813 | |
| 4 | Chandrashekar. DR | (ele) BBMP | 9731857257 | |
| 5 | CHANNAPPA | P.S.I. Traffic | 9620213455 | |
| 6 | L.N. Reddy D | AE(ele) BESCOM | 9449840478 | |
| 7 | M. Zakeel | HC | 9620952674 | |
| 8 | TPSengottuvelavan | Resident | 9902580359 | |
| 9 | N. SURESH | WC MEMBER | 9945560840 | |
| 10 | ಮುರಳಿ ಮೋಹನ್. ಎನ್. | R.I. | 9916576803 | |
| 11 | ARUN. | Raja Sri ele | 9886179665 | |
| 12 | MANJUNATHA | MEMBER | 8197968599 | |
| 13 | RUPAL RALPH | Resident CPP Member | 9980141378 | |
| 14 | SRIKANTH | RESIDENT | 99802 74C66 | |
| 15 | ARUN S.D | AEE | 9901215037 | |
| 16 | A Ponnu | W.C. | 9844166135 | |
| 17 | Devegowda. T.D | JE(E) KSH | 9986955996 | |
| 18 | Mr. S.K. Amruthesha | N.N. Officer | 9480685661 | |
| 19 | | | | |
| 20 | | | | |







